# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲು '**ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ**'**(KASS)** ಯನ್ನು ನಿರ್ವಹಿಸಲು ಹಾಗೂ ಅನುಷ್ಠಾನಗೊಳಿಸಲು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ (SAST) ಒಂದು ಪ್ರತ್ಯೇಕ ಕೋಶ (KASS CELL) ಸೃಜಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್ಎಂಆರ್ 2020, ದಿನಾಂಕ: 17.08.2021.
2. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರ ಪತ್ರ ಸಂಖ್ಯೆ: ಹೆಚ್ಎಫ್‌ಡಬ್ಲ್ಯೂ/ ಎಸ್ಎಎಸ್‌ಟಿ/ಎಂಎಂ-23/2021-22,ದಿನಾಂಕ: 27.01.2022. ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ಯೋಜನಾ ವರದಿ.

******

**ಪ್ರಸ್ತಾವನೆ:**

ರಾಜ್ಯ ಸರ್ಕಾರವು 2020-21 ಹಾಗೂ 2021-22ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲು ಒಂದು ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿ ಘೋಷಿಸಿರುತ್ತದೆ. ಅದರಂತೆ ಉದ್ದೇಶಿತ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಕೆಲವು ಉಲ್ಲೇಖಾಂಶಗಳೊಂದಿಗೆ ಪರಿಶೀಲಿಸಿ (Terms of Reference) ಒಂದು ಯೋಜನಾ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಮೇಲೆ (1)ರಲ್ಲಿ ಓದಲಾದ ದಿನಾಂಕ: 17.08.2021ರ ಸರ್ಕಾರದ ಆದೇಶದಲ್ಲಿ ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರಿಗೆ ಆದೇಶಿಸಲಾಗಿತ್ತು.

ಅದರಂತೆ, ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಇವರು ಮೇಲೆ (2)ರಲ್ಲಿ ಓದಲಾದ ದಿನಾಂಕ: 27.01.2022ರ ಪತ್ರದಲ್ಲಿ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯ (KASS) ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಈ ನೂತನ ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಮುಖಾಂತರ ಅನುಷ್ಠಾನಗೊಳಿಸಲು ಹಾಗೂ ನಿರ್ವಹಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಈಗಾಗಲೇ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದ ಆಯುಷ್ಮಾನ್ ಭಾರತ – ಆರೋಗ್ಯ ಕರ್ನಾಟಕ (AB-Ark) ಯೋಜನೆಯನ್ನು ನಿರ್ವಹಿಸುತ್ತಿದ್ದು ರಾಜ್ಯ ಸರ್ಕಾರಿ ನೌಕರರಿಗೆ ರೂಪಿಸಲಾಗಿರುವ ಈ ಯೋಜನೆಯನ್ನು ಕೂಡ ಸದರಿ

...2

ಸಂಸ್ಥೆಯಲ್ಲಿ ಲಭ್ಯವಿರುವ ಮೂಲ ಸೌಲಭ್ಯಗಳೊಂದಿಗೆ ಹಾಗೂ ಸಿಬ್ಬಂದಿಗಳ ಸಹಭಾಗಿತ್ವದಲ್ಲಿ ನಿರ್ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದರೆ, 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ'(KASS)ಯ ನಿರ್ವಹಣೆಗಾಗಿ SAST ಸಂಸ್ಥೆಯಲ್ಲಿ ಒಂದು ಪ್ರತ್ಯೇಕ ಕೋಶದ ಅವಶ್ಯಕತೆ ಇರುವುದಾಗಿ SAST ಸಂಸ್ಥೆಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿರುತ್ತದೆ ಹಾಗೂ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ನಿರ್ವಹಿಸಲು ಈ ಕೆಳಕಂಡ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಒಳಗೊಂಡ ಒಂದು ಪ್ರತ್ಯೇಕ ಕೋಶವನ್ನು ಸೃಜಿಸಲು ಪ್ರಸ್ತಾಪಿಸಿರುತ್ತಾರೆ.

| Sl No | Designation | No. of posts |
|---|---|---|
| 1. | Executive Director, SAST | 1 |
| 2. | Joint Director (Rs 74400-109600 ) | 1 |
| 3. | Deputy Director (Rs 70850-107100 ) | 1 |
| 4. | Project Manager MBBS Doctor with post-graduation (Rs 85000) | 1 |
| 5. | Team Leader - Doctor (Pre-auth) MBBS preferably with clinical experience (Rs70000 ) | 1 |
| 6. | Team Leader- Doctor(Claims) MBBS preferably with clinical experience (Rs70000 ) | 1 |
| 7. | Executive Doctors (Preauth) (Rs 60000 ) | 9 |
| 8. | Executive Doctors (Claims) (Rs 60000 ) | 9 |
| 9. | Empanelment Assistants (Rs 30000 ) | 4 |
| 10. | Data Entry Operator (Rs 25000) | 1 |
| 11. | Driver (Rs 26000) | 1 |
| 12. | Group 'D' (Rs 17500) | 1 |
| 13. | Accounts Superintendent (Rs 40900-78200 ) | 1 |
| 14. | FDA (Rs 27650-52650) | 2 |
| 15. | Accounts Manager (Rs 45000 ) | 1 |

| | | |
|---|---|---|
| 16. | Claims Manager (Rs 45000 ) | 1 |
| 17. | Claims Executives (Rs 30000 ) | 10 |
| 18. | Data Entry Operator (Rs 25000 ) | 1 |
| 19. | Group 'D' (Rs 17500 ) | 1 |
| 20. | Portal Management and Technology Unit (Rs 55000 ) | 2 |
| 21. | IT Executives (Rs 50000 ) | 3 |
| 22. | Grievance Redressal Unit (Rs.45000) | 1 |
| 23. | Call Centre Executives (Rs. 25000) | 2 |
| | Total | 56 |

ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2020,**
**ಬೆಂಗಳೂರು ದಿನಾಂಕ: 15.06.2022.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವಂತೆ ಪರಿಶೀಲಿಸಿ 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ'(KASS)ಯ ಅನುಷ್ಠಾನ ಹಾಗೂ ನಿರ್ವಹಣೆಗಾಗಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ ಈ ಆದೇಶದೊಂದಿಗೆ ಲಗತ್ತಿಸಲಾಗಿರುವ ಅನುಬಂಧದಲ್ಲಿ ತಿಳಿಸಿರುವ ಅಧಿಕಾರಿ/ಸಿಬ್ಬಂದಿಯೊಂದಿಗೆ ಒಂದು ಪ್ರತ್ಯೇಕ KASS ಘಟಕವನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿದೆ.

1. ಈ ಯೋಜನೆಯ ಕಾರ್ಯನೀತಿಗೆ (Policy Framework) ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ವಿವರವಾದ ಪ್ರತ್ಯೇಕ ಸೂಚನೆಗಳನ್ನು ನೀಡಲಾಗುವುದು.
2. ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 242 ವೆಚ್ಚ-12/2022, ದಿನಾಂಕ: 04.06.2022 ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

15.06.2022

(ಜೆ.ಡಿ. ಮಧುಚಂದ್ರ ತೇಜಸ್ವಿ)
ಸರ್ಕಾರದ ಅಪರ ಕಾರ್ಯದರ್ಶಿ
ಸಿಆಸುಇ (ಸೇವಾ ನಿಯಮಗಳು)

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
5. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
6. ಯೋಜನಾ ನಿರ್ದೇಶಕರು, ಖಜಾನೆ-2, ಖಜಾನೆ ಆಯುಕ್ತರು, 6ನೇ ಮಹಡಿ, ಕೆ.ಪಿ.ಟಿ.ಸಿ.ಎಲ್. ಅರಮನೆ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-12) ವಿಧಾನಸೌಧ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ)
9. ಶಾಖಾ ರಕ್ಷಾ ಕಡತ/ ಬಿಡಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2020,
ಬೆಂಗಳೂರು ದಿನಾಂಕ: 15.06.2022 ಕ್ಕೆ ಅನುಬಂಧ

Part -A

| Sl No | Designation | No. of posts Sanctioned | Remarks |
|---|---|---|---|
| **Medical Management Section** | | | |
| 1. | Deputy Director (Rs 70850-107100 ) | 1 | By Deputation from Health and Family Welfare Services or any State Civil Services. |
| 2. | Project Manager MBBS Doctor with post-graduation | 1 | Contract |
| 3. | Team Leader - Doctor (Pre-auth) | 1 | Contract |
| 4. | Team Leader- Doctor(Claims) | 1 | Contract |
| 5. | Empanellment Assistants | 4 | Outsource |
| 6. | Data Entry Operator | 1 | Outsource |
| **Accounts Section** | | | |
| 7. | First Division Assistant (Rs 27650-52650) | 1 | By Deputation from Health and Family Welfare Services or any State Civil Services. |
| 8. | Claims Executives | 2 | One Claim manger to process 60 claims per day. |
| 9. | Data Entry Operator | 1 | Out Source |
| 10. | Group D | 1 | Out Source |
| **IT Section** | | | |
| 11. | Portal Management and Technology Unit | 2 | Contract |
| 12. | IT Executives (Rs 50000 ) | 3 | Outsource |
| | Total | 19 | |

15.06.2022

ಸರ್ಕಾರದ ಅವರ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

**Part -B**

| | | | |
|---|---|---|---|
| 1. | Joint Director | | Already existing Joint Director of SAST to look after KASS |
| 2. | Executive Doctors (Preauth) | 09 | The services of Doctors may be hired on payment of pro-rata basis, case by case. |
| 3. | Executive Doctors (Claims) | 09 | |
| 4. | Accounts Superintendent | | Out of 2 Accounts Superintendent posted with SAST, one to be reassigned to look after KASS. |
| 5. | Accounts Manager | | Account Superintendent to perform the role of Accounts Manager |
| 6. | Claims Manager | | FDA to perform the role of Claims Manger. |
| 7. | Driver (Medical Management Section) | | AD may take one vehicle on outsource basis as per revised DPAR circular. |
| 8. | Grievance Redressal Unit (Rs 45000) | | The existing Grievance Redressal Unit and Call Centre catering to AB-ArK Scheme to be used for KASS Scheme also |
| 9. | Call Centre Executive (Rs 25000) | | |

15.06.2022

(ಜೆ.ಡಿ. ಮಧುಚಂದ್ರ ತೇಜಸ್ವಿ)
ಸರ್ಕಾರದ ಅಪರ ಕಾರ್ಯದರ್ಶಿ
ಸಿಆಸುಇ (ಸೇವಾ ನಿಯಮಗಳು)